ಗೊತ್ತಾಗಲೆ ಇಲ್ಲ. ಸುಧಾರಿಸಿದ ಈ ಕ್ಯಾಮರ ಚಟುವಟಿಕೆ ನಡೆದಾಗ ತನ್ನಿಂತಾನೆ ಚಾಲು ಆಗಿ ದಾಖಲಿಸಿಕೊಳ್ಳುತ್ತಿತ್ತು. 'ಯುಸೀ' ಅನ್ನೋ ಆ್ಯಪ್ ಒಂದನ್ನು ಡೌನ್ ಲೋಡ್ ಮಾಡಿಕೊಂಡರೆ ಮೊಬೈಲಿನಲ್ಲೆ ಅಲ್ಲಿ ಸದ್ಯ ನಡೆಯುತ್ತಿರುವ ಮತ್ತು ಹಿಂದಿನ ಇಪ್ಪತ್ನಾಲ್ಕು ಗಂಟೆಯಲ್ಲಿ ದಾಖಲಾದ ಚಟುವಟಿಕೆಯನ್ನು ನೋಡುವ, ಸೌಂಡ್ ಸಹ ಕೇಳುವ ಸೌಲಭ್ಯ ಅದರಲ್ಲಿತ್ತು. ಮೊದಲ ದಿನವೆ ಸಿಕ್ಕಿಬಿದ್ದವರು ಮುಖ್ಯೋಪಾಧ್ಯಾಪಕರ ಹೆಂಡತಿ. ಅವರ ಮನೆಗೆ ಹೋಗಿ ಹೇಳಿದಾಗ ಛೆ!ಛೆ! ಇಂತಹ ಗುರುತರ ಅಪರಾಧಿ ತಾನು ಅಂತ ಹೇಳಲು ಎಷ್ಟು ಧೈರ್ಯ ಅನ್ನುವ ರೀತಿ ಆಕ್ಷೇಪಿಸಿದರು. ಮೊಬೈಲಿನಲ್ಲಿದ್ದ ಫೋಟೊ ಮುಖಕ್ಕೆ ಹಿಡಿದರು ಕನಕಾದೇವಿ. ಈ ಫೋಟೊ ಹೇಗೆ ಬಂತು ಅನ್ನೋ ಗಲಿಬಿಲಿಯೊಂದಿಗೆ ಅವಮಾನವೂ ಸೇರಿ, 'ಅದೂ... ಪೇಪರು. ಪೇಪರು ನೀರಲ್ಲಿ ನೆಂದು ಹಸಿಯಾಗಿದ್ದಕ್ಕೆ ಹಸಿಕಸಕ್ಕೆ ಹಾಕ್ದೆ ಕಾಣತದೆ...' ಅಂತ ಏನೇನೊ ಕಾರಣ ಸೃಷ್ಟಿಸುತ್ತ, '...ಇದು ಮೊದಲ ಸಲ ಹೀಗಾಗಿದ್ದು, ಇನ್ನು ಆಗೋದಿಲ್ಲ ಆಯ್ತಾ?...' ಅಂತ ತಿಪ್ಪೆ ಸಾರಿಸುವುದರಲ್ಲಿ ಕಣ್ಣಲ್ಲಿ ನೀರು ತುಂಬಿಕೊಂಡಿತು.

ಕಸದ ಡ್ರಮ್ಮುಗಳನ್ನು ನೆಲಮಹಡಿಯ ಬಲಭಾಗದ ಹಿಂಭಾಗದ ಮೂಲೆಯಲ್ಲಿಡಲಾಗಿತ್ತು. ಎಡಗಡೆ ಎದುರು ಮೂಲೆಯಲ್ಲಿ ಮುಖ್ಯ ಗೇಟಿದ್ದುದರಿಂದ ಸೆಕ್ಯುರಿಟಿಯವನೊಬ್ಬ ಅಲ್ಲಿ ಕೂತಿರುತ್ತಿದ್ದ. ಮಧ್ಯದಲ್ಲಿ ಲಿಫ್ಟು, ಮೇಲೇರಲು ಮೆಟ್ಟಲುಗಳು, ಸುತ್ತಮುತ್ತಲು ವಾಹನ ನಿಲುಗಡೆಯಿದ್ದಿದ್ದಕ್ಕೆ ಕಸದ ಡ್ರಮ್ ಇರೋ ಜಾಗ ಸೆಕ್ಯುರಿಟಿಗಾಗಲಿ ಹೋಗಿಬಂದು ಮಾಡುವವರಿಗಾಗಲಿ ಹೆಚ್ಚುಕಮ್ಮಿ ತಟ್ಟನೆ ಕಾಣದ ಜಾಗವಾಗಿತ್ತು. ಎರಡುಮೂರು ದಿನದಿಂದ ಸಿಗುತ್ತಿದ್ದ ಯಶಸ್ಸಿನ ಉತ್ಸಾಹದಲ್ಲಿ ಜನರೇಟರ್ ರೂಮಿನ ಪಕ್ಕ ಆಗಲೆ ಮೊಬೈಲು ಹಿಡಿದು ನಿಂತ ಶಿವರಾಂ ಬಳಿ ಹೋದ ಕನಕಾದೇವಿ ಕೇಳಿದರು: 'ಇವತ್ತು ಯಾರಾದ್ರು ಸಿಕ್ರ?' ಡ್ರಮ್ಮಿಂದ ಸ್ವಲ್ಪ ದೂರ ಯಾರೋ ಪ್ಲಾಸ್ಟಿಕ್ ಚೀಲ ಇಟ್ಟಿದ್ದರು. ನಸುಕಿನಿಂದ ಹುಡುಕಿದರೆ ಪತ್ತೆಯಾಗಲಿಲ್ಲ. ನಿನ್ನೆಯ ಬ್ಯಾಕಪ್ ರೆಕಾರ್ಡಿಗೆ ಹೋದರು. ಬೆಳಗಿನಜಾವ ದೊಡ್ಡ ಬೆಕ್ಕೊಂದು ಕಾಂಪೌಂಡು ಹಾರಿ ಡ್ರಮ್ಮಿಗೆ ನೆಗೆಯಿತು. ಸ್ಯಾನಿಟರಿ ಡ್ರಮ್ಮಿನ ಮುಚ್ಚಳವನ್ನು ಕಾಲಿಂದ ಪ್ರಯತ್ನಿಸಿ ಕೆಡವಿ ಸ್ಯಾನಿಟರಿ ಪ್ಯಾಡನ್ನು ಹೊರಗೆಳೆದು ಹಿಸಿದು ಹರಡಿತು. ಆಮೇಲೆ ಅಲ್ಲೇ ಬಿಟ್ಟು ಹೋಯಿತು. 'ಕಸ ಹರಡೋದ್ರಲ್ಲಿ ಬೆಕ್ಕು ಇಲಿಗಳೂ ಸೇರಿಕೊಂಡವಲ್ರೀ!...' ಕನಕಾದೇವಿ ಉದ್ಗರಿಸಿದರು. ಒಬ್ಬರಾದ ನಂತರ ಒಬ್ಬರು ಬಂದು ಕಸ ಸುರುವಿದ್ದು, ಅಲ್ಲಿ ಓಡಾಡಿದ ದೃಶ್ಯಗಳು ಮೂಡಿದ್ದವು. 'ಅರೆ! ಇವರು ನಾಲ್ಕನೆ ಅಂತಸ್ತಿನ ಶೆಟ್ಟರಲ್ವ?' ಕಂಡುಹಿಡಿದವರಂತೆ ಕೇಳಿದರು ಶಿವರಾಂ. 'ಅವರೇ ಮತ್ತೆ! ಮಧ್ಯಾಹ್ನ ಮೂರುಗಂಟೆ ಹೊತ್ತಿಗೆ ಜನ ಯಾರಿರಲ್ಲ; ಸುಮ್ನೇ ತಂದಿಟ್ಟು ಹೋಗತಾರೆ. ನೋಡಿ ಊಹಿಸಕ್ಕೇ ಆಗತಿರಲಿಲ್ಲ.' ಗೊಣಗಿದರು. ದೃಶ್ಯದಲ್ಲಿ ರಾತ್ರಿ ಹತ್ತು ಗಂಟೆ ಹೊತ್ತಿಗೆ ಪ್ರಮೋದ್ ಕಾಣಿಸಿಕೊಂಡ. ಪ್ರಮೋದ್ ಬೆಳಿಗ್ಗೆ ಹೋದರೆ ಬರೋದು ರಾತ್ರೀನೆ. ಈಗ ಕಸ ಒಗಿಯೋದಕ್ಕೆ ಬಂದಿದಾನೆ ಪಾಪ! ಅನಿಸಿತು. ಚಿಕ್ಕ ಚೀಲ ಹಿಡಿದು ನಿಂತವನ ಹತ್ತಿರ ಒಬ್ಬ ಹುಡುಗಿ ಬಂದಳು. ಅವಳ ಕೈಯಲ್ಲು ಕಸದ ಬುಟ್ಟಿ. ಹುಡುಗಿ ಏನೋ ಕೀಟಲೆ ಮಾಡಿದ್ದು ಕಾಣಿಸಿತು. ನಗುತ್ತ ಹತ್ತಿರ ಬಂದ ಪ್ರಮೋದ್ ಅತ್ತಿತ್ತ ನೋಡಿ ಕೆನ್ನೆಗೆ ತುಟಿ ಒತ್ತಿದ. ಅವಳು ಹೊಡೆಯುವಂತೆ ಕೈಯೆತ್ತಿದಳು. ಅಷ್ಟೇ, ಹುಸಿಕೋಪ! ಇವಳು ಎರಡನೇ ಅಂತಸ್ತಿನ ಸುಬ್ಬರಾವ್ ಮಗಳು ಮಾರುತಾ ಅಲ್ಲವೇ? ಕೆಮೆಸ್ಟ್ರಿ ಜೋರಾಗಿದೆ. ಅನಿರೀಕ್ಷಿತಕ್ಕೆ ಶಿವರಾಂ ಮೈ ಬಿಸಿಯಾಗಿ ಉತ್ತೇಜಿತರಾದರು. 'ಥೂ! ನೋಡ್ರೀ... ಕಾಲ ಯಾವ ಪರಿ ಕೆಟ್ಟು ಹೋಯ್ತು? ಸುಬ್ಬರಾವ್